| PUBLICATION NAME : | Samyukta Karnataka_EDII |
|---|---|
| EDITION : | Bangalore |
| DATE : | 06/09/2023 |
| PAGE : | 3 |

# ಇಡಿಐಐ ಪ್ರಾದೇಶಿಕ ಕಚೇರಿಗೆ ಚಾಲನೆ

**ಬೆಂಗಳೂರು:** ಕುಶಲಕರ್ಮಿಗಳು, ನೇಕಾರರು, ಮಹಿಳೆಯರು, ನವೋದ್ಯಮಗಳು ಹಾಗೂ ನಿರುದ್ಯೋಗಿಗಳಿಗೆ ಉದ್ಯಮಶೀಲತೆ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡುವಲ್ಲಿ ಭಾರತೀಯ ಉದ್ಯಮಶೀಲತಾ ಅಭಿವೃದ್ಧಿ ಸಂಸ್ಥೆ(ಇಡಿಐಐ) ಯಶಸ್ವಿಯಾಗಿದೆ ಎಂದು ಇಡಿಐಐನ ಮಹಾನಿರ್ದೇಶಕ ಡಾ.ಸುನಿಲ್ ಶುಕ್ಲಾ ಹೇಳಿದರು.

ಇಡಿಐಐನ ದಕ್ಷಿಣ ಪ್ರಾದೇಶಿಕ ಕಚೇರಿಗೆ ಚಾಲನೆ ನೀಡಿ ಬಳಿಕ ಮಾತನಾಡಿದ ಅವರು, ಉದ್ಯಮಶೀಲತೆ ಪ್ರಜ್ಞಾಪೂರ್ವಕ ವೃತ್ತಿ ಎಂಬ ಉದ್ದೇಶದಿಂದ 1983ರಲ್ಲಿ ಸ್ಥಾಪನೆಯಾದ ಇಡಿಐಐ ಇಂದು ಉದ್ಯಮಶೀಲತೆ ಶಿಕ್ಷಣ, ತರಬೇತಿ, ಸಂಶೋಧನೆ, ಸಂಸ್ಥೆ ನಿರ್ಮಾಣ, ಎಂಎಸ್‌ಎಂಇ ಬೆಳವಣಿಗೆ, ನಾವೀನ್ಯತೆಗಳು ಮತ್ತು ಇನ್‌ಕ್ಯುಬೇಷನ್‌ನಲ್ಲಿ ಅಗ್ರಗಣ್ಯ ರಾಷ್ಟ್ರೀಯ ಸಂಪನ್ಮೂಲ ಸಂಸ್ಥೆ ಎನಿಸಿದೆ ಎಂದರು.